ಕರಮಚಂದ ಆತನ ಕೈನಿಂದ ಫೈಲು ತೆಗೆದುಕೊಂಡ. ಅದರ ಟ್ಯಾಗ್ ತೆಗೆದ ಕರಮಚಂದ, ನಾಗರಾಜುವಿಗೆ ಹೇಳಿದ,

"ನಾಗರಾಜು, ಒಮ್ಮೆ ಟ್ಯಾಗ್ ಕಟ್ಟಿ ನೋಡುವ".

ನಮಗೆಲ್ಲರಿಗೂ ಅಚ್ಚರಿ. ಕರಮಚಂದ ಏನು ಹೇಳ್ತಿದ್ದಾನೆ? ನಾಗರಾಜು ಚಕಿತನಾಗಿ, ಮರು ಮಾತಾಡದೆ, ಫೈಲಿನ ಟ್ಯಾಗ್ ಹಾಕಿದ.


"ನೀವೆಲ್ಲಾ ಸರಿಯಾಗಿ ಇದನ್ನು ಗಮನಿಸಿ... ನೋಡಿದಿರಲ್ಲಾ!... ಈಗ ನಾನು ಟ್ಯಾಗ್ ಬಿಡಿಸುತ್ತೇನೆ... ಸರಿ, ತಮ್ಮು, ನೀನು ಮತ್ತೆ ಟ್ಯಾಗ್ ಕಟ್ಟಿಕೊಡು.''

ಆತನೂ ವಿಚಿತ್ರವಾಗಿ ಕರಮಚಂದನನ್ನು ದಿಟ್ಟಿಸುತ್ತಾ ಟ್ಯಾಗ್ ಕಟ್ಟಿದ.

"ಹಾಂ. ಧನ್ಯವಾದಗಳು, ತಮ್ಮು. ನೋಡಿ, ಈಗ ಟ್ಯಾಗ್ ಹೇಗಿದೆ?"

ಎರಡರಲ್ಲೂ ವ್ಯತ್ಯಾಸ ನಿಚ್ಚಳವಾಗಿತ್ತು. ನಾಗರಾಜು ಕಟ್ಟಿದಾಗ ಟ್ಯಾಗಿನ ಸುರುಳಿ, ಫೈಲಿನ ಮೇಲ್ತುದಿಗೆ ಸನಿಹದಲ್ಲಿತ್ತು. ತಮ್ಮು ಹಾಕಿದ ಸುರುಳಿ, ಕೆಳಗಡೆಗೆ ಸಮೀಪದಲ್ಲಿತ್ತು!

"ಮುತ್ತಪ್ಪ, ನಾಗರಾಜುವಿನ ಮನೆಯಲ್ಲಿ ಸಿಕ್ಕಿದ ಫೈಲು ಕೊಡಿ."



ಕರಮಚಂದ ಆ ಫೈಲನ್ನು ತೆರೆದು, ಎಲ್ಲರ ಎದುರಿಗೆ ಹಿಡಿದ. ನಮ್ಮ ಗಮನವೆಲ್ಲಾ ಅದರ ಟ್ಯಾಗ್‌ನತ್ತ ತಿರುಗಿತ್ತು. ನಿಸ್ಸಂಶಯವಾಗಿ ಅದು ತಮ್ಮು ಟ್ಯಾಗ್ ಹಾಕಿದ ಫೈಲು!

ತಮ್ಮುವಿನ ಮೊಗ ಬಿಳಿಚಿಕೊಂಡಿತು. ಆತನಿಗೂ ತಕ್ಷಣ ತಾನು ಸಿಕ್ಕಿಬಿದ್ದುದು ಅರಿವಾಗಿತ್ತು!

"ಈ ವ್ಯತ್ಯಾಸ ಯಾಕೆ ಗೊತ್ತೆ? ಎಡಚರು ಟ್ಯಾಗ್ ಕಟ್ಟುವಾಗ ಮೇಲಿನ ದಾರವನ್ನು ಕೆಳಗಡೆ ಎಳೆದು, ಕಟ್ಟುತ್ತಾರೆ. ಬಹುತೇಕ ಹೆಚ್ಚಿನ ಎಡಚರದ್ದು ಅದೇ ಅಭ್ಯಾಸ. ನನಗೆ ಅಲ್ಲಿ ಫೈಲು ಕಂಡಾಗಲೇ ಇದು ಗೊತ್ತಾಯ್ತು. ಅನಂತರ, ಅಲ್ಲಿ ಕಿಟಕಿಯ ಬಾಗಿಲಿನಲ್ಲಿ ಮೂಡಿದ ಬೆರಳಚ್ಚು ಕಂಡಾಗ ಅದು ಖಚಿತವಾಯಿತು. ಆ ಬೆರಳಚ್ಚಿನಲ್ಲಿ ಹೆಬ್ಬೆರಳು ಕೆಳಮುಖವಾಗಿ ಮೂಡಿತ್ತು. ಎಡಗೈನಿಂದ ಕಿಟಕಿ ಎಳೆದಾಗ ಮಾತ್ರ ಆ ರೀತಿ ಗುರುತು ಮೂಡುತ್ತೆ. ಬಲಗೈನಿಂದ ತೆಗೆದರೆ, ಬೆರಳ ಗುರುತು ಮೇಲ್ಮುಖವಾಗಿ ಇರಬೇಕಿತ್ತು. ಹಾಗಾಗಿ ಒಬ್ಬ ಎಡಚ ಇದರಲ್ಲಿ ಇದ್ದಾನೆ ಎನ್ನುವುದು ದಿಟವಾಯಿತು. ನಾಗರಾಜು ಎಡಚರಲ್ಲವೆನ್ನುವುದನ್ನು ಗಮನಿಸಿದ್ದೆ. ಇಲ್ಲಿ ತಮ್ಮು ಫೈಲಿನ ಟ್ಯಾಗ್ ಕಟ್ಟಿದಾಗ, ಆತನೇ ಆ ವ್ಯಕ್ತಿ ಎನ್ನುವುದು ಸ್ಪಷ್ಟವಾಯಿತು."

"ಆದರೆ, ಆತ ಫೈಲು ಹೇಗೆ ಇರಿಸಿದ? ಕಿಟಕಿ ಮುಚ್ಚಿತ್ತಲ್ಲ?" ನಾಗರಾಜುವಿಗೆ ಅನುಮಾನ.

"ನಾಗರಾಜು, ಆ ಕಿಟಕಿಯ ಒಂದು ಬಾಗಿಲಿನ ಮೇಲಿನ ಚಿಲಕ ತೆಗೆದಿತ್ತಲ್ಲವೇ? ನಿಮ್ಮ ಹೇಳಿಕೆಯಂತೆ ನೀವು ಕಿಟಕಿ ತೆರೆದದ್ದೇ ಇಲ್ಲ. ಆ ಚಿಲಕವೂ ಸುಲಲಿತವಾಗಿ ಹಾಕುವಂತಿತ್ತು. ಬಹಳ ಸಮಯದಿಂದ ಹಾಕದೇ ಇದ್ದರೆ, ಸುಲಭವಾಗಿ ಸಿಕ್ಕಿಸಲು ಸಾಧ್ಯವಾಗದು. ಅಂದರೆ, ಅರ್ಥವೇನು? ಯಾರೋ ಮೇಲಿನ ಚಿಲಕ ಬೇಕೆಂತಲೇ ತೆಗೆದಿರಿಸಿದ್ದಾರೆ. ಕಿಟಕಿಯ ದಾರಂದದಲ್ಲಿ ಒಂದಿಷ್ಟು ಮರದ ಹುಡಿಗಳು ನನಗೆ ಕಂಡವು. ಆ ಬಾಗಿಲಿನ ಕೆಳಗಿನ ಚಿಲಕದ ಹುಕ್ ಸಡಿಲವಾಗಿತ್ತು. ಯಾರೋ ಅದನ್ನು ತಿರುಗಿಸಿ, ತೆಗೆದು ಮತ್ತೆ ಸುಮ್ಮಗೆ ಸಿಲುಕಿಸಿಟ್ಟಿರಬೇಕು! ಹಳೆಯ ಹುಕ್ ತೆಗೆಯುವಾಗ, ಮರದ ಹುಡಿಗಳು ಉದುರಿವೆ. ಯಾವುದೋ ವ್ಯಕ್ತಿ, ಬಾಗಿಲಿನ ಮೇಲಿನ ಚಿಲಕ ತೆಗೆದು, ಕೆಳಗಿನ ಚಿಲಕದ ಹುಕ್‌ನ್ನು ಸುಮ್ಮಗೆ ಸಿಲುಕಿಸಿ, ಅಗಳಿಯನ್ನು ದಾರಂದದ ರಂಧ್ರಕ್ಕೆ ಸಿಕ್ಕಿಸಿಟ್ಟಿರಬೇಕು. ಮೇಲು